445 (607) ಶ್ರೀ ಪ್ರಭಾಕರ ಬಂಗೇರ್ ಕೆ (ಬೆಳ್ತಂಗಡಿ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿಯಲ್ಲಿರುವ ಅಗ್ನಿಶಾಮಕ ದಳದ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದರೂ ಅಗ್ನಿಶಾಮಕ ದಳದ ಕರ್ತವ್ಯ ನಿರ್ವಹಣೆಗೆ ಬಿಟ್ಟು ಕೊಡಲು ವಿಳಂಬವಾಗಲು ಕಾರಣಗಳೇನು; ಯಾವಾಗ ಕಟ್ಟಡವನ್ನು ಇಲಾಖೆಗೆ ಬಿಟ್ಟು ಕೊಡಲಾಗುವುದು (ವಿವರ ನೀಡುವುದು);

ಶ್ರಿ ಎಂ.ಪಿ. ಪ್ರಕಾಶ್ (ಗೃಹ ಸಚಿವರು) ;

ಅ) ಬೆಳ್ತಂಗಡಿ ತಾಲ್ಲೂಕು ಗುರುವಾಯನಕೆರೆ ಎಂಬಲ್ಲಿ ಅಗ್ನಿಶಾಮಕ ಠಾಣೆ ಕಟ್ಟಡವನ್ನು ನಿರ್ಮಿಸಲು ಬೇಕಾದ ರೂ. 27.25 ಲಕ್ಷ ಅನುದಾನವನ್ನು ಲೋಕೋಪಯೋಗಿ ಇಲಾಖೆ ಪಾವತಿಸಿದ್ದು, ಅಗ್ನಿಶಾಮಕ ಠಾಣೆ ಕಟ್ಟಡ ನಿರ್ಮಾಣವು ಪೂರ್ಣಗೊಂಡಿದೆ.

ಈ ಠಾಣೆಗೆ ಬೇಕಾದ ಸಂಪರ್ಕ ರಸ್ತೆ ಕಲ್ಪಿಸಲು ದಿನಾಂಕ 12–4–2006 ರಂದು ರೂ. 4.00 ಲಕ್ಷ ಹಾಗೂ ದಿನಾಂಕ 9–11–2006 ರಂದು ರೂ. 1.15 ಲಕ್ಷ ಒಟ್ಟು 5.15 ಲಕ್ಷಗಳನ್ನು ಪಾವತಿಸಲಾಗಿದೆ. ನೀರನ್ನು ತುಂಬಿಕೊಂಡು ಚಲಿಸುವ ಜಲವಾಹನಗಳು ಈ ರಸ್ತೆಯಲ್ಲಿ ಸಾಗಲು ರಸ್ತೆಯು ಗಟ್ಟಿಯಾಗಿರುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ ಸಂಪರ್ಕ ರಸ್ತೆಯ ಕಾಮಗಾರಿ ಮುಗಿಸಿದ ತಕ್ಷಣ ಕಟ್ಟಡವನ್ನು ಇಲಾಖೆಯ ವಶಕ್ಕೆ ಪಡೆಯಲಾಗುವುದು. ಅಲ್ಲದೆ ಲೋಕೋಪಯೋಗಿ ಇಲಾಖೆಯು ನಿರ್ಮಿಸಿರುವ ಕಟ್ಟಡವನ್ನು ಪರಿಶೀಲಿಸಿದಾಗ ಸದರಿ ಠಾಣಾ ಕಟ್ಟಡದ ಮೇಲ್ಛಾವಣಿಯು ಸೋರಿತ್ತಿದ್ದು, ಇದರಿಂದ ಗೋಡೆಗಳು ಶಿಥಿಲಗೊಂಡಿರುವುದಾಗಿ ತಿಳಿಸಿರುತ್ತಾರೆ.

ಈ ಮೇಲಿನ ದುರಸ್ತಿ ಹಾಗೂ ಸಂಪರ್ಕ ರಸ್ತೆಯನ್ನು ಪೂರ್ಣವಾಗಿ ನಿರ್ಮಿಸಿಕೊಟ್ಟ ಕೂಡಲೇ ಕಟ್ಟಡವನ್ನು ಇಲಾಖೆಯ ವಶಕ್ಕೆ ಪಡೆದು ಠಾಣೆಯನ್ನು ಸ್ಥಳಾಂತರಿಸಲಾಗುವುದು.

446 (980) ಶ್ರೀ ರಘುಪತಿ ಭಟ್ ಕೆ. (ಉಡುಪಿ) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?